**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಹೊಸಕೋಟೆ**

**ಸಿ. ಸಿ. ನಂ.1735/2017**

ಪಿರ್ಯಾದುದಾರರು:- ನಂದಗುಡಿ ಪೊಲೀಸ್ ಠಾಣೆ, ಹೊಸಕೋಟೆ

ವಿರುದ್ಧ

ಆರೋಪಿಗಳು:- 1. ಉಮೇಶ, 26 ವರ್ಷ
ಬಿನ್ ಮುನಿಯಪ್ಪ ಅಲಿಯಾಸ್ ಪೂಜಾರಿ ಮುನಿಯಪ್ಪ
2. ಪ್ರವೀಣ, 24 ವರ್ಷ ಬಿನ್ ಮುನಿಯಪ್ಪ
3. ಸುನೀಲ್, 20 ವರ್ಷ ಬಿನ್ ಮುನಿಯಪ್ಪ
ಎಲ್ಲರ ವಾಸ: ತಾವರೆಕೆರೆ ಗ್ರಾಮ,
ನಂದಗುಡಿ ಹೋಬಳಿ, ಹೊಸಕೋಟೆ ತಾಲ್ಲೂಕು.

**ದೋಷಾರೋಪಣೆ**

ಶ್ರೀ ಗಿರೀಶ ಆರ್.ಬಿ., ಬಿ.ಎ.ಎಲ್., ಎಲ್.ಎಲ್.ಬಿ., ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯಾದ ನಾನು, ಆರೋಪಿಗಳಾದ ನಿಮ್ಮ ಮೇಲೆ ಆಪಾದಿಸುವುದೇನೆಂದರೆ:

ದಿ: 29.08.2017 ರಂದು ರಾತ್ರಿ 7.30 ಗಂಟೆ ಸಮಯದಲ್ಲಿ ಘನ ನ್ಯಾಯಾಲಯದ ವ್ಯಾಪ್ತಿಯಲ್ಲಿರುವ ಹೊಸಕೋಟೆ ತಾಲ್ಲೂಕು, ನಂದಗುಡಿ ಪೊಲೀಸ್ ಠಾಣಾ ಸರಹದ್ದು, ತಾವರೆಕರೆ ಗ್ರಾಮದಲ್ಲಿ ಗಣಪತಿ ವಿಸರ್ಜನೆ ಕಾರ್ಯಕ್ರಮವನ್ನು ಇಟ್ಟುಕೊಂಡಿದ್ದು, ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಕೆಲವು ಹುಡುಗರು ಪಟಾಕಿಗಳನ್ನು ಇಡಲು ಮೊಬೈಲ್ ಮತ್ತು ಪ್ರಿಂಟರ್ಸ್ ಅಂಗಡಿಯ ಮುಂಭಾಗಕ್ಕೆ ಹೋದಾಗ ಚಾ.ಸಾ.2ರವರು ಅಂಗಡಿಯ ಬಳಿ ಮಹಿಳೆಯರು, ಮಕ್ಕಳು ಮತ್ತು ಗಿರಾಕಿಗಳು ಇದ್ದಾರೆ ಇಲ್ಲಿ ಪಟಾಕಿ ಇಡಬೇಡಿ, ಇನ್ನೂ ಸ್ವಲ್ಪ ಮುಂದೆ ಇಟ್ಟುಕೊಳ್ಳಿ ಎಂದು ಹೇಳಿದ್ದಕ್ಕೆ ಅಲ್ಲಿಯೇ ಸ್ಥಳದಲ್ಲಿದ್ದ ನಿಮ್ಮ ಪೈಕಿ 1ನೇ ಆರೋಪಿಯಾದ ನೀವು ಬೋಳಿಮಗನೇ, ನಮಗೆ ಇಷ್ಟ ಬಂದ ಕಡೆಗೆ ಪಟಾಕಿ ಇಡುತ್ತೇವೆ, ಕೇಳಲು ನೀನು ಯಾರು? ಎಂದು ಚಾ.ಸಾ.2ರವರನ್ನು ಅವಾಚ್ಯ ಶಬ್ದಗಳಿಂದ ಬೈದು ಶಾಂತಿಭಂಗವನ್ನುಂಟು ಮಾಡಿರುತ್ತೀರಿ ಎಂದು ಆರೋಪಿಸಲಾಗಿದೆ. ಮುಂದುವರೆದು, 2 ಮತ್ತು 3ನೇ ಆರೋಪಿಗಳಾದ ನೀವುಗಳು ಚಾ.ಸಾ.2ರವರಿಗೆ ಸ್ಥಳಕ್ಕೆ ಬಂದು ಪಟಾಕಿ ಇಡಬೇಡ ಎಂದು ನಮಗೇ ಎದುರು ವಾದಿಸುತ್ತೀಯಾ, ಸೂಳೇ ಮಗನೇ, ನಾವು ಏನು ಮಾಡಿದರೂ ಯಾರೂ

ಕೇಳಬಾರದು ಎಂದು ಅವಾಚ್ಯ ಶಬ್ದಗಳಿಂದ ಬೈದು ಶಾಂತಿಭಂಗವನ್ನುಂಟು ಮಾಡಿರತ್ತೀರಿ ಎಂದು ಆರೋಪಿಸಲಾಗಿದೆ. ಆ ಮೂಲಕ ನೀವು ಭಾ.ದಂ.ಸಂ. ಕಲಂ.504ರ ಸಹವಾಚಕ ಕಲಂ.34ರ ರೀತ್ಯ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುವಿರೆಂದು ಆರೋಪಿಸಲಾಗಿದೆ.

ಅದೇ ದಿನ, ಅದೇ ಸಮಯ ಮತ್ತು ಸ್ಥಳದಲ್ಲಿ, 1ನೇ ಆರೋಪಿಯಾದ ನೀವು ಚಾ.ಸಾ.2ರವರಿಗೆ ಕಾಲಿನಿಂದ ಮರ್ಮಾಂಗಕ್ಕೆ ಒದ್ದು ನೋವುಂಟು ಮಾಡಿರುತ್ತೀರಿ ಎಂದು ಆರೋಪಿಸಲಾಗಿದೆ. ಮುಂದುವರೆದು, 2 ಮತ್ತು 3ನೇ ಆರೋಪಿಗಳಾದ ನೀವುಗಳು ಚಾ.ಸಾ.2ರವರಿಗೆ ಎದೆ, ಬೆನ್ನಿಗೆ ಹಾಗೂ ಮೈಕೈಗಳಿಗೆ ಕೈಗಳಿಂದ ಹೊಡೆದು, ಕಾಲಿನಿಂದ ಒದ್ದು ಸಾಮಾನ್ಯ ಸ್ವರೂಪದ ನೋವು ಮತ್ತು ಗಾಯವನ್ನುಂಟು ಮಾಡಿರುತ್ತೀರಿ ಎಂದು ಆರೋಪಿಸಲಾಗಿದೆ. ಆ ಮೂಲಕ ನೀವು ಭಾ.ದಂ.ಸಂ. ಕಲಂ.323ರ ಸಹವಾಚಕ ಕಲಂ.34ರ ರೀತ್ಯ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುವಿರೆಂದು ಆರೋಪಿಸಲಾಗಿದೆ.

ಅದೇ ದಿನ, ಅದೇ ಸಮಯ ಮತ್ತು ಸ್ಥಳದಲ್ಲಿ, ಆರೋಪಿಗಳಾದ ನೀವುಗಳು ಚಾ.ಸಾ.2ರವರಿಗೆ ಜೀವ ಭಯವನ್ನುಂಟು ಮಾಡುವ ಉದ್ದೇಶದಿಂದ ನಿನ್ನನ್ನು ನಿನ್ನ ಅಂಗಡಿ ಸಮೇತ ಸುಟ್ಟು ಹಾಕುತ್ತೇವೆ ಎಂದು ಪ್ರಾಣ ಬೆದರಿಕೆ ಹಾಕಿರುತ್ತೀರಿ ಎಂದು ಆರೋಪಿಸಲಾಗಿದೆ. ಆ ಮೂಲಕ ನೀವು ಭಾ.ದಂ.ಸಂ. ಕಲಂ.506ರ ಸಹವಾಚಕ ಕಲಂ.34ರ ರೀತ್ಯ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುವಿರೆಂದು ಆರೋಪಿಸಲಾಗಿದೆ.

ಈ ಮೇಲ್ಕಂಡ ದೋಷಾರೋಪವನ್ನು ನೀವು ಈ ನ್ಯಾಯಾಲಯದ ಸಂಜ್ಞಾನದೊಳಗೆ ಎಸಗಿದ್ದು ನಿಮ್ಮನ್ನು ವಿಚಾರಣೆಗೆ ಒಳಪಡಿಸಲು ಈ ಮೂಲಕ ನಾನು ನಿರ್ದೇಶಿಸುತ್ತೇನೆ.

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ. ನ್ಯಾಯಾಲಯ., ಹೊಸಕೋಟೆ.**

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಹೊಸಕೋಟೆ**

**ಸಿ. ಸಿ. ನಂ.1735/2017**

ಪಿರ್ಯಾದುದಾರರು:- ನಂದಗುಡಿ ಪೊಲೀಸ್ ಠಾಣೆ, ಹೊಸಕೋಟೆ

ವಿರುದ್ಧ

ಆರೋಪಿಗಳು:- 1. ಉಮೇಶ, 26 ವರ್ಷ
ಬಿನ್ ಮುನಿಯಪ್ಪ ಅಲಿಯಾಸ್ ಪೂಜಾರಿ ಮುನಿಯಪ್ಪ
2. ಪ್ರವೀಣ, 24 ವರ್ಷ ಬಿನ್ ಮುನಿಯಪ್ಪ
3. ಸುನೀಲ್, 20 ವರ್ಷ ಬಿನ್ ಮುನಿಯಪ್ಪ
ಎಲ್ಲರ ವಾಸ: ತಾವರೆಕೆರೆ ಗ್ರಾಮ,
ನಂದಗುಡಿ ಹೋಬಳಿ, ಹೊಸಕೋಟೆ ತಾಲ್ಲೂಕು.

**ದೋಷಾರೋಪಣೆ**

ಪ್ರಶ್ನೆ 1: ಮೇಲ್ಕಂಡ ದೋಷಾರೋಪಣೆ ಓದಿ ಹೇಳಿದ್ದು ನಿಮಗೆ ಅರ್ಥವಾಯಿತೆ?

ಉತ್ತರ:

ಪ್ರಶ್ನೆ 2: ನೀವು ತಪ್ಪನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೆ?

ಉತ್ತರ:

ಮೇಲ್ಕಂಡ ಆಪಾದನೆಯನ್ನು ಆರೋಪಿಗಳಿಗೆ ಓದಿ ಹೇಳಿ ಅವರ ಉತ್ತರವನ್ನು ಅವರು ಉತ್ತರಿಸಿದಂತೆಯೇ ಬರೆದುಕೊಂಡಿದ್ದು ಸಂಪೂರ್ಣ ಹಾಗೂ ಸರಿಯಾದ ಮಾಹಿತಿಯನ್ನೊಳಗೊಂಡಿದೆ ಎಂದು ತೆರೆದ ನ್ಯಾಯಾಲಯದಲ್ಲಿ ದಿ: 13.01.2022 ರಂದು ಧೃಢೀಕರಿಸಿದ್ದೇನೆ.

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ. ನ್ಯಾಯಾಲಯ., ಹೊಸಕೋಟೆ.**